Karnataka Contingency Fund (Amendment) Bill, 1984 Leave to introduce.

MR. SPEAKER.-- I have received the recommendation of the Governor for introduction and consideration of Karnataka Contingency Fund (Amendment) Bill, 1984. Hon'ble Minister for Law may move the motion.

SRI A. LAKSHMISAGAR (Minister For Law & Parliamentary Affairs).-- Sir, I beg to move.

"That leave be granted to introduce the Karnataka Contingency Fund (Amendment) Bill, 1984.

MR. SPEAKER -- The Question is.

"That leave be granted to introduce the Karnataka Contingency Fund (Amendment) Bill, 1984".

The motion was adopted and the leave was granted.

Hon'ble Minister may introduce the Bill.

SRI A LAKSHMISAGAR.— Sir, I introduce.

The Karnataka Contingency Fund (Amendment) Bill, 1984.

MR SPEAKER.-- The Bill is introduced.

The Karnataka Appropriation Bill, 1984.

Motion to Consider

SRI A. LAKSHMISAGAR.-- Sir, I move.

"That Karnataka Appropriation Bill, 1984 be taken into consideration".

The question was proposed.

ಶ್ರೀ ವೈ. ರಾಮಕೃಷ್ಣ (ಆನೇಕಲ್).—ಸನಮಾನ್ಯ ಅಧಕ್ಷರೇ ಪೋಲೀಸ್ ಇಲಾಖೆಯ ಮೇಲೆ ನಾನು ಮಾತನಾಡತ್ತಾ, ಒಂದೆರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅದು ಏನೆಂದರೆ ಸರ್ಕಾರ ಆಡಳಿತ ಯಂತ್ರವನ್ನು ನಡೆಸುವಾಗ ಜನರಲ್ಲಿ ವಿಶ್ವಾಸವನ್ನು ಮೂಡಿಸಬೇಕು. ಅದು ಮೊಟ್ಟಮೊದಲನೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ತಾವು 'ಏನು ಹೇಳಿದಿರಿ ಜನರಲ್ಲಿ ವಿಶ್ವಾಸಮೂಡಿಸಬೇಕೆಂದು ಹೇಳಿದಿರಾ?

ಶ್ರೀ ವೈ. ರಾಮಕೃಷ್ಣ.—ಆಡಳಿತದಲ್ಲಿ ಇರತಕ್ಕಂಥವರು ಆಡಳಿತವನ್ನು ನಡೆಸುವುದರಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸುವಂಥ ಒಂದು ಅವಕಾಶವನ್ನು ಕಲ್ಪಿಸಬೇಕು ಇದರಲ್ಲೂ ಕೂಡ ಇದುವರೆಗೆ ಯಾರು ಸಾಮಾಜಿಕ ಅನ್ಯಾಯದಿಂದ ವಂಚಿತರಾಗಿದ್ದಾರೋ ಅಂಥವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸುವುದರಲ್ಲಿ ಸರ್ಕಾರ ಮುಖ್ಯಪಾತ್ರ ವಹಿಸಬೇಕು. ಆದರೆ ಈವತ್ತಿನ ದಿವಸ ಇದು ಒಂದೂಕೂಡ ನಮ ಆಡಳಿತದಲ್ಲಿ ಕಾಣುತ್ತಿಲ್ಲವೆಂದು ಬಹಳ ವಿಷಾದದಿಂದ ಎಕ್ಸ್‌ಪ್ರೆಸ್ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ ಈಗೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಅವರ ಪರವಾಗಿ ನಾನು ಇದ್ದೇನೆ.

ಶ್ರೀ ವೈ. ರಾಮಕೃಷ್ಣ.—ಬಹಳ ಸಂತೋಷ, ತಾವು ಅವರ ಪರವಾಗಿ ಉತ್ತರವನ್ನು ಕೊಡಬೇಕು. ಈಗ ಪೋಲೀಸ್ ಖಾತೆಯನ್ನು ತೆಗೆದುಕೊಂಡರೆ, ಈ ಪೋಲೀಸ್ ಖಾತೆ ಇರತಕ್ಕಂಥದ್ದು ಕಾನೂನನ್ನು ಅನೇಕ ಕಡೆ ಕಾನೂನು ಭಕ್ಷಣೆಯಾಗುತ್ತಿದೆ. ಕಾನೂನನ್ನು ರಕ್ಷಣೆ ಮಾಡುವ ಬದಲು ಭಕ್ಷಣೆಯಾಗುತ್ತಿದೆ. ಇದರಬಗೆ ಅನೇಕ ಉದಾಹರಣೆಗಳನ್ನು ಕೊಡಲಿಕ್ಕೆ ತಯಾರಾಗಿದ್ದೇನೆ ಆದರೆ ಮೊಟ್ಟಮೊದಲನೆಯದಾಗಿನ ನಾನು ಹೇಳಿದಹಾಗೆ ಈ ಪೋಲೀಸ್ ಡಿಪಾರ್ಟಮೆಂಟ್ ಈ ವತ್ತಿನದಿವಸ ಹಿಂದುಳಿದ ವರ್ಗದವರಿಗೆ, ಹರಿಜಳ ಗಿರಿಜನರಿಗೆ, ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವುದರಲ್ಲಿ ಬಹಳ ವಿಫಲರಾಗಿದ್ದಾರೆ ಎಂದು ತಿಳಿಸಲಿಕ್ಕೆ ಬಹು ವಿಷಾದ ಪಡುತ್ತೇನೆ. ಯಾರು, ಯಾವ ಅಧಿಕಾರಿಗಳು ಈ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿ